# ಎನ್‌ಐಟಿಕೆ: ಸ್ಮಾರ್ಟ್ ಇ-ಮೊಬಿಲಿಟಿ ವಾಹನಗಳ ಹಸ್ತಾಂತರ

**ಸುರತ್ಕಲ್, ಮಾ. 2:** ಜಿಪಿಎಸ್ ಟ್ರ್ಯಾಕಿಂಗ್ ಮತ್ತು ಸ್ಮಾರ್ಟ್ ಲಾಕ್ ತಂತ್ರಜ್ಞಾನ ಹೊಂದಿರುವ ಇ-ಮೊಬಿಲಿಟಿ ವಾಹನಗಳನ್ನು ಎನ್‌ಐಟಿಕೆ ಸುರತ್ಕಲ್‌ನ ದಿವ್ಯಾಂಗ ವಿದ್ಯಾರ್ಥಿಗಳಿಗೆ ಪೆಟ್ರೋನೆಟ್ ಎಂಎಚ್‌ಬಿ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ 1989ರ ಮೆಕ್ಯಾನಿಕಲ್ ಎಂಜಿನಿಯರಿಂಗ್ ಬ್ಯಾಚ್‌ನ ಹಳೆಯ ವಿದ್ಯಾರ್ಥಿ ಸುಧೀರ್ ಕುಮಾರ್ ಅವರು, ಎನ್‌ಐಟಿಕೆ ಸುರತ್ಕಲ್ ನಿರ್ದೇಶಕ ಪ್ರೊ| ಬಿ. ರವಿ ಅವರೊಂದಿಗೆ, ಇತ್ತೀಚೆಗೆ ಕ್ಯಾಂಪಸ್‌ನಲ್ಲಿ ನಡೆದ ಸಮಾರಂಭದಲ್ಲಿ ಹಸ್ತಾಂತರಿಸಿದರು.



25 ಇ-ಸೈಕಲ್‌ಗಳು ಮತ್ತು 7 ಮೋಟರೈಸ್ಡ್ ವೀಲ್‌ಚೇರ್‌ಗಳನ್ನು ಎನ್‌ಐಟಿಕೆ ಸುರತ್ಕಲ್‌ನ ಸಹ ಪ್ರಾಧ್ಯಾಪಕ ಡಾ| ಪೃಥ್ವಿರಾಜ ಅವರು ಸಂಸ್ಥೆಯೊಳಗೆ ವಿನ್ಯಾಸಗೊಳಿಸಿ ತಯಾರಿಸಿದ್ದಾರೆ.

ಎಲ್ಲ ವಾಹನಗಳು 1970ರ ಬ್ಯಾಚ್‌ನ ಹಳೆಯ ವಿದ್ಯಾರ್ಥಿಗಳ ಸಹಕಾರದಿಂದ 2022ರಲ್ಲಿ ಸ್ಥಾಪಿಸಲಾದ "ಉರ್ಜಾ" ಸೌರಶಕ್ತಿ ಚಾರ್ಜಿಂಗ್ ಸ್ಟೇಷನ್‌ಗೆ ಹೊಂದಿಕೊಳ್ಳುವಂತಿವೆ.

ಈ ಯೋಜನೆಗೆ ಪೆಟ್ರೋನೆಟ್ ಎಂಎಚ್‌ಬಿ ಲಿಮಿಟೆಡ್, 2025-26ನೇ ಸಾಲಿನ ಸಿಎಸ್‌ಆರ್ ಯೋಜನೆಯಡಿ ನಿಧಿ ಒದಗಿಸಿದೆ.

ನಿರ್ದೇಶಕ ಪ್ರೊ| ರವಿ ದಿವ್ಯಾಂಗ ವಿದ್ಯಾರ್ಥಿಗಳಿಗೆ ಸಂಚಾರದ ಸೌಲಭ್ಯ ಒದಗಿಸಲು ಪೆಟ್ರೋನೆಟ್ ನೀಡಿರುವ ಸಿಎಸ್ ಆರ್ ಸಹಕಾರವನ್ನು ಶ್ಲಾಘಿಸಿದರು.

ಪೆಟ್ರೋನೆಟ್‌ನ ಹಿರಿಯ ಅಧಿಕಾರಿಗಳಾದ ತಾಂತ್ರಿಕ ವಿಭಾಗದ ಮುಖ್ಯಸ್ಥ ಸೈಸುಧಮ್ಮ್ಯೀ, ಕಾರ್ಯಾಚರಣೆ ವಿಭಾಗದ ಮುಖ್ಯಸ್ಥ ಉದಯ ಪೈ ಹಾಗೂ ಇತರರು ಉಪಸ್ಥಿತರಿದ್ದರು.

ಎನ್‌ಐಟಿಕೆ ಸಂಸ್ಥೆಯ ಕಾರ್ಯನಿರ್ವಹಣಾಧಿಕಾರಿಗಳಾದ ಪ್ರೊ| ಕುಮಾರ್ ಜಿ.ಎನ್., ಪ್ರೊ| ವೆಂಕಟೇಶ ಪೆರುಮಲ್, ಪ್ರೊ| ಪ್ರಸನ್ನ ಬೆಳೂರು, ಸೇರಿದಂತೆ ಅನೇಕ ಅಧ್ಯಾಪಕರು, ಸಿಬಂದಿ ಮತ್ತು ವಿದ್ಯಾರ್ಥಿ ಪ್ರತಿನಿಧಿಗಳು ಹಾಜರಿದ್ದರು.

Udayavani, Date: 03/03/2026, p. 03